

ಬಿಟ್ಟು ಸುತ್ತಿ ಬಳಸಿ ಹೋಗಬೇಕಾಗುತ್ತಿತ್ತು. ಫೋನ್, ವಾಹನ ಸೌಕರ್ಯ ಇರದಿದ್ದ ಆ ಕಾಲದಲ್ಲಿ, ಒಮ್ಮೆ ಭೋರೆಂದು ಸುರಿಯುತ್ತಿದ್ದ ಮಳೆಯಲ್ಲಿ ನಡೆದುಕೊಂಡು, ಜೊತೆಯಲ್ಲಿ ಬೀಸುತ್ತಿದ್ದ ಗಾಳಿಯಿಂದಾಗಿ ಬಟ್ಟೆ ಒದ್ದೆ ಮಾಡಿಕೊಂಡು, ದೂರದ ಕಾಲೇಜಿನವರೆಗೆ ಹೋದೆವು. ನೋಟಿಸ್ ಬೋರ್ಡ್‌ನಲ್ಲಿ 'ಕಾಲೇಜ್ ಈಸ್ ರಿಮೈನ್ಡ್ ಕ್ಲೋಸ್ಡ್ ಡ್ಯೂ ಟು ಹೆವಿ ರೈನ್' ಎಂಬುದನ್ನು ನೋಡಿ ನಾನು ಮತ್ತು ನನ್ನ ದೊಡ್ಡಪ್ಪನ ಮಗಳು ವಾಪಸ್ ಮನೆಗೆ ಹೊರಟೆವು. ಪೇಟೆಯಲ್ಲಿ ಕುಳಿತು ಏನು ಮಾಡುವುದು, ಮನೆಗೆ ಹೋಗಿಬಿಡೋಣ ಎಂದುಕೊಂಡು ಮನೆ ದಾರಿ ಹಿಡಿದೆವು. ಪೇಟೆಯ ವಲಯ ದಾಟುತ್ತಿದ್ದಂತೆ ಎದುರಿನಲ್ಲಿ ಬರುತ್ತಿದ್ದವರೊಬ್ಬರು, 'ಮುಂದೆ ಹೋಗಬೇಡಿ. ಎಕ್ಕನಹಳ್ಳ ತುಂಬಿ ರಸ್ತೆಯ ಮೇಲೆ ಬಂದಿದೆ. ವಾಪಸ್ ಪೇಟೆಗೆ ಹೋಗಿ ಯಾರ ಮನೆಯಲ್ಲಾದರೂ ಕುಳಿತಿರಿ. ಹಳ್ಳ ಇಳಿದ ಮೇಲೆ ಬನ್ನಿ' ಎಂದರು. ನನ್ನ ಅಕ್ಕನೋ ಭಾರೀ ಧೈರ್ಯಸ್ಥೆ. 'ಏ... ಏನೂ ಆಗಲ್ಲ... ಅವರೆಲ್ಲ ಈ ಕಡೆ ಬಂದಿಲ್ವಾ? ನಾವೂ ಹೋಗೋಣ ನಡಿ' ಎಂದೊಡನೆ ನನಗೂ ಹುಚ್ಚು ಧೈರ್ಯ ಬಂದುಬಿಟ್ಟಿತು. ಸರಿ, ಇಬ್ಬರೂ ಲಂಗವನ್ನು ಮೊಣಕಾಲವರೆಗೆ ಕಟ್ಟಿದೆವು. ಕೊಡೆಯನ್ನು ಮಡಿಸಿ ಒಂದು ಕೈಯಲ್ಲಿ ಹಿಡಿದುಕೊಂಡೆವು. ಇಬ್ಬರೂ ಒಬ್ಬರ ಕೈ ಇನ್ನೊಬ್ಬರು ಹಿಡಿದುಕೊಂಡು ಮಧ್ಯದಲ್ಲಿ ರಸ್ತೆಯ ಮೇಲೆ, ಆಚೀಚೆ ಗದ್ದೆಯಲ್ಲಿ ತುಂಬಿ ಹರಿಯುತ್ತಿದ್ದ ಹಳ್ಳದಲ್ಲಿ ನಡೆದೇಬಿಟ್ಟೆವು! ನೇರವಾಗಿ ನಡೆಯದೆ ಸ್ವಲ್ಪ ಆಚೀಚೆ ಕಾಲಿಟ್ಟರೂ ಹಳ್ಳದ ಗುಂಡಿಯೊಳಗೆ ಬೀಳುವುದೇ! ಮಳೆ ಸಣ್ಣದಾಗಿ ಬೀಳುತ್ತಲೇ ಇತ್ತು. ಒಂದಿಬ್ಬರು ಗಂಡಸರು ನಮ್ಮಂತೆ ದಾಟುತ್ತಿದ್ದವರು ನಮ್ಮನ್ನು ನೋಡಿ ಗದರಿಸಿದರು. ಅದ್ಯಾವುದಕ್ಕೂ ಜಗ್ಗದೆ ನಾವು ಕೈಬಿಡದೆ ಗಟ್ಟಿಯಾಗಿ ಹಿಡಿದುಕೊಂಡು ಹಳ್ಳ ದಾಟಿದೆವು. ಮಳೆಯ ಜೊತೆ ಚಳಿ ಬೇರೆ. ಒದ್ದೆ ಬಟ್ಟೆಯೊಂದಿಗೆ ಮನೆಗೆ ಬಂದಾಗ ಮಳೆ–ಚಳಿಯಿಂದಾಗಿ ನನ್ನ ಕೈಉಗುರು, ತುಟಿ ನೀಲಿಗಟ್ಟಿದ್ದವು. ಮನೆಯಲ್ಲಿದ್ದ ದೊಡ್ಡಮ್ಮ(ಅಮ್ಮನ ಅಮ್ಮ)ನಿಂದ ಇಬ್ಬರಿಗೂ ಸಹಸ್ರನಾಮಾರ್ಚನೆಯಾಯಿತು– 'ನಿಮಗೇನು